**ಪಿ.ಡಬ್ಲ್ಯು-01**

**ಆರ್ ನಟರಾಜ್**

**ಸಾಕ್ಷಿಯನ್ನು ದಿನಾಂಕಃ .14.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ.ಜಿ /ಎನ್.ಎಸ್.ಜಿ ವಕೀಲರಿಂದಃ**

ನಾನು ಆರೋಪಿಗೆ ವಕೀಲರ ಮೂಲಕ ಕಳುಹಿಸಿದ ನೋಟಿಸ್ ನ್ನು ನನ್ನ ಮಾಹಿತಿ ಮೇರೆಗೆ ಕಳುಹಿಸಿರುತ್ತೇವೆ. ನಾನು ಆರೋಪಿಗೆ ಕಳುಹಿಸಿದ ನೋಟಿಸ್ ನಲ್ಲಿ ಮನೆ ಕಟ್ಟಲು ಸಾಲ ಕೇಳಿರುವುದಾಗಿ ತಿಳಿಸಿರುವುದಿಲ್ಲ. ಅದೇ ರೀತಿ ನನ್ನ ಫಿರ್ಯಾದಿನಲ್ಲಿ ಆರೋಪಿ ಮನೆ ಕಟ್ಟಲು ಸಾಲ ಕೇಳಿರುವುದಾಗಿ ಬರೆಸಿರುವುದಿಲ್ಲ. ನಾನು ಆರೋಪಿಗೆ ಕಳುಹಿಸಿದ ನೋಟಿಸ್ ನಲ್ಲಿ ಅಸಲು ಸಾಲದ ಮೊತ್ತವಾದ ರೂ.4,20,000/- ಜೊತೆಗೆ ಬಡ್ಡಿಯನ್ನು ಸೇರಿಸಿ ಕೊಡುವಂತೆ ತಿಳಿಸಿರುತ್ತೇನೆ, ಆದರೆ ಎಷ್ಟು ಶೇಕಡ ಬಡ್ಡಿ ಎಂದು ನಿರ್ಧರಿಸಿರುವುದಿಲ್ಲ. ನಾನು ಸಲ್ಲಿಸಿದ ಫಿರ್ಯಾದು ಹಾಗೂ ನೋಟಿಸಿನಲ್ಲಿ ವಾರ್ಷಿಕ 18 ಶೇಕಡ ಎಂದು ನಮೂದು ಮಾಡಿಸಿರುವುದಿಲ್ಲ. ನಾನು ಯಾವುದೇ ಬಡ್ಡಿ ಲೇವಾ-ದೇವಿ ವ್ಯವಹಾರ ಮಾಡುವುದಿಲ್ಲ. ನಾನು ಆದಾಯ ತೆರಿಗೆ ಪಾವತಿದಾರನಾಗಿರುತ್ತೇನೆ. ನನ್ನ ಆದಾರಯ ತೆರಿಗೆಯಲ್ಲಿ ಆರೋಪಿಗೆ ಸಾಲ ನೀಡಿರುವ ಬಗ್ಗೆ ಘೋಷಣೆ ಮಾಡಿರುತ್ತೇನೆ. ಸದರಿ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇತ್ತೆ ಎಂದರೆ ಸಾಕ್ಷಿ ಆಡಿಟರ್ ರವರನ್ನು ಕೇಳಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ನನಗೆ ವಾರ್ಷಿಕ ಒಟ್ಟು ಸುಮಾರು ರೂ. 50,000/- ಆದಾಯವಿರುತ್ತದೆ. ನಾನು ಮನೆಯಲ್ಲಿ ಇಟ್ಟಿದ್ದ ಹಣದಿಂದ ಆರೋಪಿಗೆ ರೂ.4,20,000/- ಸಾಲ ನೀಡಿರುತ್ತೇನೆ. ಆ ರೀತಿ ಅಷ್ಟು ಹಣ ನನ್ನ ಬಳಿ ಇದ್ದ ಬಗ್ಗೆ ಬೇರೆ ಯಾವುದೇ ದಾಖಲೆ ಇರುವುದಿಲ್ಲ. ನಾನು ಅಷ್ಟು ಹಣವನ್ನು ತುರ್ತು ಅಗತ್ಯ ಇರುತ್ತದೆ ಎನ್ನುವ ಕಾರಣಕ್ಕಾಗಿ ಮನೆಯಲ್ಲಿ ಇಟ್ಟುಕೊಂಡಿರುತ್ತೇನೆ.

ಆರೋಪಿ ಬೇರೆ ಅಂಗಡಿಯನ್ನು ತೆರೆದು ವ್ಯಾಪಾರ ಮಾಡಲು ಹಣ ಬೇಕೆಂದು ಸಾಲ ಕೇಳಿರುತ್ತಾರೆ. ಸಾಕ್ಷಿಯು ಮುಂದುವರಿದು ಅವರು ಹಿಂದೆ ನನ್ನ ಜೊತೆಯಲ್ಲಿ ಬಟ್ಟೆ

ಅಂಗಡಿಯಲ್ಲಿ ಸುಮಾರು 4-5 ವರ್ಷ ಕೆಲಸ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ 2021-22 ನೇ ಇಸವಿಯವರೆಗೆ ನನ್ನ ಜೊತೆಯಲ್ಲಿ ಕೆಲಸ ಮಾಡಿಕೊಂಡಿದ್ದರು. ಸಾಕ್ಷಿ ಮುಂದುವರಿದು ಅವರ ನನ್ನ ಅಂಗಡಿಯಲ್ಲಿ ಟೈಲರಿಂಗ್ ಕೆಲಸ ಮಾಡಿಕೊಂಡಿದ್ದು, ನಾನು ಅವರಿಗೆ ಯಾವುದೇ ಸಂಬಳ ಕೊಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ಸದರಿ ಟೈಲರಿಂಗ್ ಕೆಲಸದಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿ 2019 ನೇ ಇಸವಿಯಿಂದ ಇಲ್ಲಿಯವರೆಗೂ ಹೆಚ್.ಡಿ.ಕೋಟೆಯ ಪುರಸಭೆಯಲ್ಲಿ ಕೌನ್ಸ್ ಲರ್ ಆಗಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆರೋಪಿಯು ಪುರಸಭೆ ಕೌನ್ಸ್ ಲರ್ ಎಂಬುವುದನ್ನು ನಾನು ಆರೋಪಿಯಿಂದ ತಿಳಿದುಕೊಂಡಿರುವುದಿಲ್ಲ, ಬೇರೆಯವರು ಹೇಳುವುದನ್ನು ಕೇಳಿ ತಿಳಿದುಕೊಂಡಿರುತ್ತೇನೆ. ಆರೋಪಿಯು ತೆರೆಯಬೇಕೆಂದು ಹೇಳಿದ್ದ ಅಂಗಡಿಯ ಜಾಗವನ್ನು ನಾನು ಆಗ ನೋಡಿರುವುದಿಲ್ಲ. ನಾನು ಆರೋಪಿಗೆ ಸಾಲದ ಹಣ ಕೊಟ್ಟಿದ್ದೆ ಎಂದು ಹೇಳಲಾದ ದಿನ/ ಸಮಯದಲ್ಲಿ ದೇಶ ವ್ಯಾಪಿ ಕೊವಿಡ್ ಸಾಂಕ್ರಾಮಿಕ ಖಾಯಿಲೆ ಇದ್ದು, ಯಾರು ಮನೆಯಿಂದ ಹೊರಗೆ ಬರುತ್ತಿರಲಿಲ್ಲ ಎಂದರೆ ಸಾಕ್ಷಿ ನಾನು ಫಿರ್ಯಾದಿನಲ್ಲಿ ತಿಳಿಸಿದ ದಿನವೇ ಆರೋಪಿಗೆ ಸಾಲ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.**

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**